# ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001. ದೂರವಾಣಿ : 080-22224212

ಸಂಖ್ಯೆ : ಸಿಆಸುಇ 16 ಮಾಸ(ಅಮುಚು 3)2018 ದಿನಾಂಕ : 13-5-2018.

## ಪತ್ರಿಕಾ ಪ್ರಕಟಣೆ

### ಲೊಟ್ಟೆಗೊಲ್ಲಹಳ್ಳಿ : ಮರು ಮತದಾನಕ್ಕೆ ಸಿದ್ಧತೆಗಳು

**ಬೆಂಗಳೂರು, ಮೇ 13 :–** ವಿಧಾನಸಭಾ ಕ್ಷೇತ್ರ – 158 – ಹೆಬ್ಬಾಳದ ಮತಗಟ್ಟೆ ಸಂಖ್ಯೆ 2, ಗಾಂಧಿ ವಿದ್ಯಾಲಯ, ಕನ್ನಡ ಮತ್ತು ತಮಿಳು ಪ್ರಾಥಮಿಕ ಶಾಲೆ, ಲೊಟ್ಟೆಗೊಲ್ಲಹಳ್ಳಿಯಲ್ಲಿ ನಡೆದ ಮತದಾನವನ್ನು ಭಾರತ ಚುನಾವಣಾ ಆಯೋಗವು ಅನರ್ಹವೆಂದು ಪರಿಗಣಿಸಿರುವುದರಿಂದ ದಿನಾಂಕ : 14–5–2018 ರಂದು ಬೆಳಿಗ್ಗೆ 7 ರಿಂದ ಸಂಜೆ 6 ರ ವರೆಗೆ ಮರು ಮತದಾನ ನಡೆಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಎಲ್ಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಕೈಗೊಳ್ಳಲಾಗಿರುವ ಸಿದ್ಧತೆಗಳು :–**

- ಎಡಗೈ ಮಧ್ಯ ಬೆರಳಿಗೆ ಅಳಿಸಲಾಗದ ಶಾಹಿಯನ್ನು ಹಾಕಲಾಗುವುದು.
- ಈ ಕ್ಷೇತ್ರದಲ್ಲಿ ಮತದಾರರು ಮತದಾನ ಮಾಡಲು ಅನುವಾಗುವಂತೆ ದಿ: 14–5–2018 ರಂದು ಮತಗಟ್ಟೆಯ ವ್ಯಾಪ್ತಿಗೆ ಅನ್ವಯಿಸಿರುವಂತೆ ರಜೆ ಘೋಷಣೆ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತಿದೆ.
- ಈ ಕ್ಷೇತ್ರದಲ್ಲಿ 1444 ಮತದಾರರಿದ್ದು, ಈ ಪೈಕಿ 740 ಪುರುಷರು ಮತ್ತು 704 ಮಹಿಳೆಯರಿದ್ದಾರೆ.
- ಮೀಸಲಾಗಿಟ್ಟಿದ್ದ ಇವಿಎಂಗಳನ್ನು ಮೇ 14 ರಂದು ನಡೆಯಲಿರುವ ಮರುಮತದಾನಕ್ಕೆ ಬಳಸಲಾಗುವುದು. ಚುನಾವಣಾ ಸಿಬ್ಬಂದಿಯ ಎರಡು ತಂಡಗಳನ್ನು ಮರು ಮತದಾನಕ್ಕೆ ನಿಯೋಜಿಸಲಾಗಿದ್ದು, ಈ ಪೈಕಿ ಒಬ್ಬರು ಪಿಆರ್‌ಓ, ಒಬ್ಬರು ಎಪಿಆರ್‌ಓ ಮತ್ತು ಮೂವರು ಪೋಲಿಂಗ್ ಆಫೀಸರ್‌ಗಳನ್ನು ನಿಯೋಜಿಸಲಾಗಿದೆ. ಒಂದು ತಂಡವನ್ನು ಮೀಸಲಿರಿಸಲಾಗಿದೆ.
- ಈ ತಂಡಗಳಿಗೆ ಇವಿಎಂ, ವಿವಿಪ್ಯಾಟ್ ಕುರಿತಂತೆ ತರಬೇತಿ ನೀಡಲಾಗಿದ್ದು, ಸಂಬಂಧಪಟ್ಟ ಎಲ್ಲಾ ಅರ್ಜಿಗಳನ್ನು ಭರ್ತಿ ಮಾಡಿ, ದಿನಾಂಕ : 14–5–2018 ರಂದು ಚುನಾವಣಾ ಕೆಲಸಕ್ಕೆ ವರದಿ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ. ಒಟ್ಟಾರೆ 8 ಮಾದರಿ ನೀತಿ ಸಂಹಿತೆ ತಂಡಗಳು ನೀತಿ ಸಂಹಿತೆಯನ್ನು ಜಾರಿಗೊಳಿಸುತ್ತಿದ್ದಾರೆ.
- ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಮನೆ ಮನೆಗೆ ತೆರಳಿ ಅಧಿಕಾರಿಗಳು ಮರು ಮತದಾನ ನಡೆಯುವ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ಅಲ್ಲದೇ, ಮತದಾರರ ಚೀಟಿಗಳನ್ನು ವಿತರಿಸುತ್ತಿದ್ದಾರೆ. ಇಂದು ಆಟೋಗಳಲ್ಲಿ ಧ್ವನಿವರ್ಧಕಗಳ ಮೂಲಕ ಲೊಟ್ಟೆಗೊಲ್ಲಹಳ್ಳಿ ಪ್ರದೇಶದಲ್ಲಿ ಮರು ಮತದಾನ ನಡೆಯುವ ಬಗ್ಗೆ ಪ್ರಚಾರ ನೀಡಲಾಗಿದೆ.
- ಮರು ಮತದಾನದ ಕುರಿತು ಚುನಾವಣಾಧಿಕಾರಿಗಳಿಂದ ಕಚೇರಿ ಆದೇಶವನ್ನು ದಿನಪತ್ರಿಕೆಗಳ ಮೂಲಕ ವಿತರಿಸಲಾಗುವುದು.
- ನಾಳಿನ ಮರು ಮತದಾನದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಪೊಲೀಸ್ ಸಮನ್ವಯಾಧಿಕಾರಿಗಳು ಹಾಗೂ ಅವರ ತಂಡಕ್ಕೆ ಸೂಚಿಸಲಾಗಿದೆ.
- ಬಿಇಎಲ್ ಅಭಿಯಂತರರು ಮರು ಮತದಾನದ ಸಂದರ್ಭದಲ್ಲಿ ಕೇಂದ್ರಸ್ಥಾನದಲ್ಲಿ ಇರುವಂತೆ ಹೆಬ್ಬಾಳ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ಅಂಚೆ ಮತದಾನ ತಂಡದ ಡಾ: ಎಸ್.ಎಂ. ಶ್ರೀಧರ್ ಅವರ ನೇತೃತ್ವದಲ್ಲಿ ಸೆಕ್ಟರ್ ಅಧಿಕಾರಿಗಳು ಹಾಗೂ ಮಾಸ್ಟರ್ ತರಬೇತಿದಾರರು ಮರು ಮತದಾನದ ಸಿದ್ಧತೆಯಲ್ಲಿ ನೆರವಾಗುತ್ತಿದ್ದಾರೆ.
- ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಹಾಗೂ ಚುನಾವಣಾ ಏಜೆಂಟರಿಗೆ ಮಾಹಿತಿಯನ್ನು ನೀಡಲಾಗಿದ್ದು, ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕರು ಮರು ಮತದಾನದ ಸಿದ್ಧತೆಗಳನ್ನು ಪರಿಶೀಲಿಸಿದ್ದಾರೆ ಎಂದು ಬಿಬಿಎಂಪಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---------

**<u>ಪದವೀಧರರ ಚುನಾವಣೆ : ಹೆಸರು ಸೇರ್ಪಡೆಗೆ ಜೂನ್ 22 ಕೊನೆ ದಿನಾಂಕ</u>**

**ಬೆಂಗಳೂರು, ಮೇ 13** :– ಕರ್ನಾಟಕ ವಿಧಾನ ಪರಿಷತ್‌ನ 6 ಪದವೀಧರರ ಸ್ಥಾನಗಳಿಗೆ 2018 ರ ಜೂನ್ 8 ರಂದು ಚುನಾವಣೆ ನಡೆಯಲಿದೆ. ಈ ಸಂಬಂಧ 2018 ರ ಮೇ 15 ರಂದು ಅಧಿಸೂಚನೆ ಹೊರಡಿಸಲಾಗುತ್ತಿದೆ. ಪದವೀಧರರು ಮತ್ತು ಶಿಕ್ಷಕರು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಿಕೊಳ್ಳಲು ಜೂನ್ 22 ಕೊನೆ ದಿನವಾಗಿದೆ.

ದ್ವೈವಾರ್ಷಿಕವಾಗಿ ನಡೆಯುವ ಪದವೀಧರರ ಚುನಾವಣೆಗೆ ನಾಮಪತ್ರ ಸಲ್ಲಿಸಲು ಮೇ 22 ಕೊನೆ ದಿನವಾಗಿದೆ. ಮೇ 23 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಮೇ 25 ರಂದು ನಾಮಪತ್ರ ಪಡೆಯಲು ಕೊನೆಯ ದಿನವಾಗಿದೆ. ಜೂನ್ 8 ರಂದು ಬೆಳಿಗ್ಗೆ 8 ರಿಂದ ಸಂಜೆ 4 ರ ವರೆಗೆ ಮತದಾನ ನಡೆಯಲಿದೆ. ಜೂನ್ 12 ರಂದು ಮತ ಎಣಿಕೆ ನಡೆಯಲಿದೆ. ಒಟ್ಟಾರೆಯಾಗಿ ಜೂನ್ 15 ರ ಒಳಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

ರಾಜ್ಯದ ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ರಮೇಶ್ ಬಾಬು, ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಕ್ಯಾ. ಗಣೇಶ್ ಕಾರ್ಣಿಕ್, ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಮರಿತಿಬ್ಬೇಗೌಡ ಅವರು ಪ್ರತಿನಿಧಿಸುತ್ತಿದ್ದಾರೆ. ಪದವೀಧರರ ನೈರುತ್ಯ ಕ್ಷೇತ್ರವನ್ನು ಡಿ.ಎಚ್. ಶಂಕರಮೂರ್ತಿ, ಈಶಾನ್ಯ ಕ್ಷೇತ್ರವನ್ನು ಅಮರನಾಥ ಪಾಟೀಲ್ ಮತ್ತು ಬೆಂಗಳೂರು ಪದವೀಧರರ ಕ್ಷೇತ್ರವನ್ನು ರಾಮಚಂದ್ರಗೌಡ ಅವರು ಪ್ರತಿನಿಧಿಸುತ್ತಿದ್ದಾರೆ. ಇವರೆಲ್ಲರೂ ಜೂನ್ 21 ರಂದು ನಿವೃತ್ತರಾಗಲಿದ್ದಾರೆ.

---------